ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012

ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033

ಸಂಖ್ಯೆ:DPUE-EST30AN(NCOM)/18/2025-R AND G (ಇ-1822728) ದಿನಾಂಕ: 11-07-2025

-: ಜ್ಞಾಪನ :-

ವಿಷಯ: ನಾರ್ಥ್ ಹಿಲ್ಸ್ ಪದವಿ ಪೂರ್ವ ಕಾಲೇಜು, ದಾಸರಹಳ್ಳಿ, ಬೆಂಗಳೂರು ಉತ್ತರ ಜಿಲ್ಲೆ (ಎಎನ್1046) ಈ ಕಾಲೇಜಿಗೆ 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಸಂಸ್ಕೃತ ಭಾಷೆ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸುತ್ತೋಲೆ ಸಂಖ್ಯೆ:DPUE-EST30PRG(NCS)/1/2025-PLCY-E-1698036 ದಿನಾಂಕ: 30-04-2025.
2)ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ಉತ್ತರ ಜಿಲ್ಲೆ ಇವರ ಪತ್ರ ದಿನಾಂಕ:25-06-2025.

*******

ಪ್ರಸ್ತಾವನೆ:-

ನಾರ್ಥ್ ಹಿಲ್ಸ್ ಪದವಿ ಪೂರ್ವ ಕಾಲೇಜು, ದಾಸರಹಳ್ಳಿ, ಬೆಂಗಳೂರು ಉತ್ತರ ಜಿಲ್ಲೆ(ಎಎನ್1046) ಈ ಕಾಲೇಜಿಗೆ 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಸಂಸ್ಕೃತ ಭಾಷೆ ಪ್ರಾರಂಭಿಸುವ ಸಂಬಂಧ ಉಲ್ಲೇಖ 02ರಲ್ಲಿ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಅನುಮತಿ ನೀಡುವ ಕುರಿತಂತೆ ಕೆಳಕಂಡಂತೆ ಆದೇಶಿಸಿದೆ.

ಆದೇಶ:-

ನಾರ್ಥ್ ಹಿಲ್ಸ್ ಪದವಿ ಪೂರ್ವ ಕಾಲೇಜು, ದಾಸರಹಳ್ಳಿ, ಬೆಂಗಳೂರು ಉತ್ತರ ಜಿಲ್ಲೆ(ಎಎನ್1046) ಈ ಕಾಲೇಜಿಗೆ Karnataka Department of School Education (Pre-University) (Academic, Registration, Administration and Grant-in-Aid etc) Rules-2024 ರ ನಿಯಮ 14 ರೀತ್ಯಾ ಭಾಗ-1ರಲ್ಲಿ ಹೊಸದಾಗಿ ಸಂಸ್ಕೃತ ಭಾಷೆಯನ್ನು 2025-26ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಅನುದಾನ ರಹಿತವಾಗಿ ಪ್ರಾರಂಭಿಸಲು ಕೆಳಕಂಡ ನಿಬಂಧನೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

ಷರತ್ತುಗಳು:-

1. ಈ ಹೊಸ ಸಂಯೋಜನೆ / ಭಾಷೆ ಮಂಜೂರಾತಿಯು ಶಾಶ್ವತ ಅನುದಾನರಹಿತವಾಗಿದ್ದು,

ಆಡಳಿತ ಮಂಡಳಿಯು ಮುಂದೆ ಯಾವುದೇ ಸಂದರ್ಭದಲ್ಲಿ ಅನುದಾನ ಕೇಳುವುದಿಲ್ಲವೆಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು. ಮಂಜೂರಾದ ಹೆಚ್ಚುವರಿ ಭಾಷೆ / ಸಂಯೋಜನೆಗೆ ನೇಮಕ ಮಾಡಲು ಉಪನ್ಯಾಸಕರಿಗೆ / ಸಿಬ್ಬಂದಿಗೆ ಸರ್ಕಾರದಿಂದ ಯಾವುದೇ ಅನುದಾನ ಲಭ್ಯವಾಗುವುದಿಲ್ಲ

2. ಅರ್ಹ ವಿದ್ಯಾರ್ಹತೆಯುಳ್ಳ ಉಪನ್ಯಾಸಕರುಗಳನ್ನು ಶಾಶ್ವತ ಅನುದಾನರಹಿತವಾಗಿ ಆಡಳಿತ ಮಂಡಳಿಯ ಜವಾಬ್ದಾರಿಯ ಮೇಲೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.
3. ಸರ್ಕಾರವು ನಿಗಧಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಮತ್ತು ವಂತಿಕೆಗಳನ್ನು ವಸೂಲಿ ಮಾಡತಕ್ಕದ್ದಲ್ಲ.
4. ಸಂಬಂಧಪಟ್ಟ ಆಡಳಿತ ಮಂಡಳಿಗಳು ಕರ್ನಾಟಕ ಶಿಕ್ಷಣ ಅಧಿನಿಯಮ 1983 ಹಾಗೂ ನಿಯಮಗಳ ಉಪಬಂಧಗಳ ಎಲ್ಲಾ ಷರತ್ತುಗಳ ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.
5. ಹೆಚ್ಚುವರಿ ಸಂಯೋಜನೆ / ಭಾಷೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಅಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುತ್ತದೆ.
6. ಈ ಹೊಸ ಭಾಷೆ / ಸಂಯೋಜನೆ ಅಗತ್ಯ ಸೌಲಭ್ಯಗಳನ್ನು ಹಾಗೂ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿರತಕ್ಕದ್ದು.
7. ಗಣಕವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಕನಿಷ್ಠ 10 ವಿದ್ಯಾರ್ಥಿಗಳಿಗೆ ಒಂದರಂತೆ (10:1) ಗಣಕಯಂತ್ರಗಳಿರಬೇಕು. 40 ವಿದ್ಯಾರ್ಥಿಗಳಿಗಿಂತೆ ಮೇಲ್ಪಟ್ಟಲ್ಲಿ ನಿಯಮಾನುಸಾರ ಹೆಚ್ಚುವರಿ ಗಣಕಯಂತ್ರ ಕೊಠಡಿಗಳನ್ನು ಹಾಗೂ ಇತರೆ ಸೌಲಭ್ಯಗಳಿರಬೇಕು.
8. ಪ್ರತಿ ವಿಭಾಗಕ್ಕೆ 80 ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು ಮತ್ತು ಇತ್ತೀಚಿನ ದಾಖಲಾತಿ ನಿಯಮವನ್ನು ತಪ್ಪದೇ ಪಾಲಿಸಲು ಸೂಚಿಸಿದೆ .
9. ಒಂದು ತರಗತಿ / ಉಪನ್ಯಾಸ ಕೊಠಡಿಯಲ್ಲಿ 40 ವಿದ್ಯಾರ್ಥಿಗಳಿಗೆ 450 ಚದರ ಅಡಿ ವಿಸ್ತೀರ್ಣವುಳ್ಳ ಕೊಠಡಿ ಹೊಂದಿರತಕ್ಕದು ಮತ್ತು ಗರಿಷ್ಠ ವಿದ್ಯಾರ್ಥಿಗಳ ದಾಖಲಾತಿಗೆ, ಪ್ರತಿ ಹೆಚ್ಚುವರಿ ವಿದ್ಯಾರ್ಥಿಗೆ 10 ಚದರ ಅಡಿ ಹೆಚ್ಚುವರಿ ವಿಸ್ತೀರ್ಣವುಳ್ಳ ಕೊಠಡಿ ಹೊಂದಿರತಕ್ಕದ್ದು.
10. ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 483/2004 ರಲ್ಲಿನ ದಿನಾಂಕ: 13-04-2009ರ ತೀರ್ಪಿನಲ್ಲಿ ಶಾಲಾ ಕಾಲೇಜುಗಳ ಕಟ್ಟಡವು ಸುರಕ್ಷಿತ ಮತ್ತು ಎಲ್ಲಾ ಕೋನಗಳಿಂದ ಸುಭದ್ರವಾಗಿದೆ ಎಂಬುದನ್ನು ಮತ್ತು ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾದಲ್ಲಿನ ಸುರಕ್ಷತಾ ನಿಬಂಧನೆಗಳನ್ವಯ ಕಟ್ಟಡ ನಿರ್ಮಿಸಿರುವುದರ ಕುರಿತು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದಿರತಕ್ಕದ್ದು.
11. ಶಾಲಾ ಕಾಲೇಜುಗಳ ಕಟ್ಟಡದಲ್ಲಿ ಅಗ್ನಿನಿವಾರಣೆ ಮತ್ತು ಅಗ್ನಿಶಮನ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿರುವ ಬಗ್ಗೆ ಹಾಗೂ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಲಹಾ ಪತ್ರ ಮತ್ತು ಸಮಾಪನಾ ಪ್ರಮಾಣ ಪತ್ರ ಪಡೆದಿರತಕ್ಕದ್ದು.
12. ಒಂದು ವೇಳೆ ವಿದ್ಯಾಸಂಸ್ಥೆಯು ಮೇಲಿನ ನಿಬಂಧನೆ / ಷರತ್ತುಗಳನ್ನು ಪಾಲಿಸಲು ವಿಫಲವಾದಲ್ಲಿ ಕಾಲೇಜು ಮಂಜೂರಾತಿ ಆದೇಶ ರದ್ದುಪಡಿಸಲು ಸೂಕ್ತ ಪ್ರಸ್ತಾವನೆಯನ್ನು ಜಿಲ್ಲಾ ಉಪ ನಿರ್ದೇಶಕರು ತಪ್ಪದೇ ಸಲ್ಲಿಸತಕ್ಕದ್ದು.
13. ಆನ್-ಲೈನ್ ಅರ್ಜಿ ಮೂಲಕ ಅಪ್-ಲೊಡ್ ಮಾಡಿರುವ ಎಲ್ಲಾ ದಾಖಲೆಗಳ ನೈಜತೆ ಮತ್ತು ನಿಖರತೆ ಕುರಿತು ಸಂಸ್ಥೆಯವರು ಸಲ್ಲಿಸಿರುವ ಅರ್ಜಿಯಲ್ಲಿ ಸ್ವತಃ ದೃಢಪಡಿಸಿರುವ ಅಥವಾ

ಪ್ರಮಾಣೀಕರಿಸಿರುವ ಆಧರದ ಮೇಲೆ ಸದರಿ ಕಾಲೇಜಿಗೆ ಮಂಜೂರಾತಿ ನೀಡಿದ್ದು, ಯಾವುದೇ ದಾಖಲೆ/ಮಾಹಿತಿ ಸುಳ್ಳೆಂದು ಕಂಡು ಬಂದಲ್ಲಿ ಯಾವುದೇ ಪೂರ್ವ ಸೂಚನೆ/ಮುನ್ಸೂಚನೆ ಇಲ್ಲದೆ ಮಂಜೂರಾತಿ ಮತ್ತು ಮಾನ್ಯತೆಯನ್ನು ರದ್ದುಪಡಿಸುವ ಅಧಿಕಾರ/ಹಕ್ಕನ್ನು ಇಲಾಖೆಯು ಕಾಯ್ದಿರಿಸಿಕೊಡಿರುತ್ತದೆ.

14. ಮೇಲಿನ ಎಲ್ಲಾ ನಿಬಂಧನೆಗಳು / ಷರತ್ತುಗಳಲ್ಲಿ ಯಾವುದೇ ನಿಬಂಧನೆಗಳು / ಷರತ್ತನ್ನು ಪಾಲಿಸದಿದ್ದಲ್ಲಿ ಮಂಜೂರಾತಿ ಆದೇಶವನ್ನು ನಿಯಮಾನುಸಾರ ರದ್ದುಪಡಿಸಲಾಗುವುದು.

{ನಿರ್ದೇಶಕರ ಆದೇಶದ ಮೇರೆಗೆ}

Digitally signed by
SWETHA G N
Date: 11-07-2025
14:42:13

ಜಂಟಿ ನಿರ್ದೇಶಕರು (ಮೌ&ಅ)
ಶಾಲಾ ಶಿಕ್ಷಣ ಇಲಾಖೆ
(ಪದವಿ ಪೂರ್ವ)

ಗೆ,

ಪ್ರಾಚಾರ್ಯರು, ನಾರ್ಥ್ ಹಿಲ್ಸ್ ಪದವಿ ಪೂರ್ವ ಕಾಲೇಜು, ದಾಸರಹಳ್ಳಿ, ಬೆಂಗಳೂರು ಉತ್ತರ ಜಿಲ್ಲೆ(ಎಎನ್1046).

ಪ್ರತಿಗಳು:-

1. ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು ಉತ್ತರ ಜಿಲ್ಲೆ.
2. ಅಧ್ಯಕ್ಷರು / ಕಾರ್ಯದರ್ಶಿಗಳು, PIONEERS EDUCATIONAL TRUST, NM.15, AGS OFFICERS COLONY, ANANDA NAGAR, BANGLORE-560024- ಜಿಲ್ಲಾ ಉಪನಿರ್ದೇಶಕರ ಮುಖಾಂತರ.
3. ಗಣಕಶಾಖೆ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು- ಮುಂದಿನ ಕ್ರಮಕ್ಕಾಗಿ.
4. ಹೆಚ್ಚುವರಿ / ಕಚೇರಿ.